**ಪಿಡಬ್ಲೂ.1:ಮಧುಸೂಧನ್ ಡಿ. ರಾವ್.,**

**<u>ದಿನಾಂಕಃ 25.04.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ನಾನು ದ್ವಿತೀಯ ಪಿಯುಸಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ರಿಯಲ್ ಎಸ್ಟೇಟ್ ಬಿಸಿನೆಸ್ ಮತ್ತು ಸಿವಿಲ್ ವರ್ಕ್ ಮಾಡುತ್ತೇನೆ. ಆ ವ್ಯವಹಾರವನ್ನು ಹೊರತುಪಡಿಸಿ ಬೇರೆ ವ್ಯವಹಾರ ಮಾಡುವುದಿಲ್ಲ. ನನಗೆ ವಾರ್ಷಿಕ 15 ರಿಂದ 20 ಲಕ್ಷ ರೂ.ಗಳ ವ್ಯವಹಾರವಿರುತ್ತದೆ. ನಾನು 6-7 ವರ್ಷಗಳಿಂದ ಆದಾಯ ತೆರಿಗೆ ಪಾವತಿದಾರನಾಗಿರುತ್ತೇನೆ. 6-7 ವರ್ಷಗಳ ಹಿಂದೆ ಆದಾಯ ತೆರಿಗೆ ಪಾವತಿ ಮಾಡುವಷ್ಟು ಆದಾಯವಿರಲಿಲ್ಲ. 2017 ರಿಂದ 2019 ರವರೆಗೆ ಆದಾಯ ತೆರಿಗೆ ಪಾವತಿ ಮಾಡಿರುತ್ತೇನೆ. ದೂರಿನಲ್ಲಿ ನಮೂದಿಸಿರುವ ವ್ಯವಹಾರವನ್ನು ತೆರಿಗೆ ಪಾವತಿ ವರದಿಯಲ್ಲಿ ನಮೂದಿಸಿರುವುದಿಲ್ಲ. ಜಿಎಸ್‌ಟಿ ಅನ್ವಯವಾಗುವ ಆದಾಯಗಳನ್ನು ಮಾತ್ರ ತೆರಿಗೆ ಪಾವತಿ ವರದಿಯಲ್ಲಿ ನಮೂದಿಸಿಕೊಳ್ಳಬೇಕು ಬೇರೆ ಆದಾಯಗಳನ್ನು ನಮೂದಿಸಕೊಳ್ಳಬಾರದು ಎಂದು ನಿಯಮವಿದೆಯೇ ಎಂದರೆ ಆ ರೀತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ದೂರಿನಲ್ಲಿ ನಮೂದಿಸಿರುವ ವ್ಯವಹಾರವನ್ನು ಆದಾಯ ತೆರಿಗೆ ಪಾವತಿ ವರದಿಯಲ್ಲಿ ನಮೂದಿಸಿಕೊಳ್ಳಬಹುದಿತ್ತು ಎಂದರೆ ಸರಿ. ನಾನು ಹಣಕಾಸಿನ ವ್ಯವಹಾರ ಮಾಡುವುದಿಲ್ಲ. ನಾನು ಬೇರೆಯವರಿಗೆ ಹಣ ನೀಡಿ ಅದನ್ನು ವಸೂಲಿ ಮಾಡುವ ಕೆಲಸ ಮಾಡುವುದಿಲ್ಲ.

**2.** ನಾನು ಆರೋಪಿತರು ಹಣ ಕೇಳಿದ ಕಾರಣ ಒಟ್ಟು ರೂ.3,87,000/- ಗಳನ್ನು ನೀಡಿರುತ್ತೇನೆ ಎಂದು ಪಿರ್ಯಾದಿನಲ್ಲಿ ನಮೂದಿಸಿರುತ್ತೇನೆ. ನಾನು ಚೀಟಿ ವ್ಯವಹಾರ ಮಾಡುವುದಿಲ್ಲ. 2018 ನೇ ಇಸವಿಯಲ್ಲಿ ನೀವು ಚೀಟಿ ವ್ಯವಹಾರ ಮಾಡುತ್ತಿದ್ದು, ಆರೋಪಿತರು 5 ಲಕ್ಷ ರೂ.ಗಳ ಚೀಟಿಯ ಚಂದಾದಾರರಾಗಿದ್ದು ಅದರಲ್ಲಿ ರೂ.1,13,000/- ಗಳನ್ನು ಬಿಟ್ಟು

ಉಳಿದ ರೂ.3,87,000/- ಗಳನ್ನು ಪಡೆದುಕೊಂಡಿದ್ದರು ಎಂದರೆ ಸಾಕ್ಷಿಯು ನಾನು ಚೀಟಿ ವ್ಯವಹಾರ ಮಾಡುವುದಿಲ್ಲ ಎಂದು ನುಡಿಯುತ್ತಾರೆ. ಚೀಟಿ ವ್ಯವಹಾರದ ವೇಳೆಯಲ್ಲಿ ಆರೋಪಿತರಿಂದ 3 ಖಾಲಿ ಚೆಕ್ಕು ಹಾಗೂ ಎರಡು ಖಾಲಿ ಪೇಪರ್‌ಗಳಿಗೆ ಸಹಿ ಪಡೆದು ಆರೋಪಿತರಿಂದ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನಾನು ಚೀಟಿ ವ್ಯವಹಾರ ಮಾಡುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ರೂ.3,87,000/- ಗಳ ಕೈ ಸಾಲವನ್ನು ಮರುಪಾವತಿ ಮಾಡಿರುವುದಿಲ್ಲ ಬದಲಾಗಿ ಅವರು ಪ್ರತಿ ತಿಂಗಳು ಚೀಟಿ ಹಣವನ್ನು ಮರುಪಾವತಿಸುತ್ತಿದ್ದರು ಎಂದರೆ ಸರಿಯಲ್ಲ.

**3.** ನಿಮ್ಮ ಪಿರ್ಯಾದಿನಲ್ಲಿ ನವೆಂಬರ್ 2020 ರಲ್ಲಿ ಆರೋಪಿ 5 ಲಕ್ಷ ರೂ. ಕೈ ಸಾಲ ಕೇಳಿದ್ದರು, ನಾನು ನಗದಾಗಿ ನೀಡಿರುತ್ತೇನೆ ಎಂದು ನಮೂದಿಸಿರುತ್ತೀರಿ ಎಂದರೆ ಸರಿ. ರೂ.1,60,000/- ಗಳನ್ನು ಬ್ಯಾಂಕಿನಿಂದ ಹಿಂಪಡೆದುಕೊಂಡಿದ್ದೇನೆ ಎಂದು ನಮೂದಿಸಿದ್ದೀರಿ ಅದರ ಬಗ್ಗೆ ದಾಖಲೆಗಳಿವೆಯೇ ಎಂದರೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ರೂ.1,60,000/- ಗಳನ್ನು ಆರೋಪಿಗೆ ಬ್ಯಾಂಕ್ ಮೂಲಕ ವರ್ಗಾಯಿಸಲು ತೊಂದರೆ ಇತ್ತೆ ಎಂದರೆ ಸಾಕ್ಷಿಯು ಆರೋಪಿ ನಗದಾಗಿ ಕೇಳಿದ ಕಾರಣ ನಗದು ರೂಪದಲ್ಲಿ ನೀಡಿದ್ದೇನೆ ಎಂದು ನುಡಿಯುತ್ತಾರೆ. ಒಂದು ಕಟ್ಟಡವನ್ನು ರೂ.3,60,00,000/- ಕ್ಕೆ ಮಾರಾಟ ಮಾಡಿಸಿಕೊಟ್ಟ ಕಾರಣ, ರೂ.3,40,000/- ಗಳು ರಿಯಲ್ ಎಸ್ಟೇಟ್ ಬಿಸಿನೆಸ್‌ನಿಂದ ನನಗೆ ಆದಾಯ ಬಂದಿತ್ತು. ಆ ರೀತಿ ಆದಾಯ ಬಂದ ಬಗ್ಗೆ ನನ್ನ ಬಳಿ ದಾಖಲೆಗಳಿರುವುದಿಲ್ಲ. ನೀವು ಮಾರಾಟ ಮಾಡಿಸಿಕೊಟ್ಟಂತಹ ಕಟ್ಟಡದ ದಾಖಲೆಗಳನ್ನು ಹಾಜರುಪಡಿಸಲು ಸಾಧ್ಯವೇ ಎಂದರೆ ಸಾಕ್ಷಿಯು ಅದನ್ನು ಹಾಜರುಪಡಿಸಲು ಸಾಧ್ಯವಾಗುವುದಿಲ್ಲ ಎಂದು ನುಡಿಯುತ್ತಾರೆ. ನಿಮಗೆ ರಿಯಲ್ ಎಸ್ಟೇಟ್ ಬಿಸಿನೆಸ್‌ನಿಂದ ರೂ.3,40,000/- ಆದಾಯವಾಗಿರಲಿಲ್ಲ ಹಾಗೂ ನೀವು

ಆರೋಪಿತರಿಗೆ 5 ಲಕ್ಷ ರೂ. ಸಾಲ ನೀಡಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ 5 ಲಕ್ಷ ರೂ. ಸಾಲ ನೀಡಿದ ವೇಳೆಯಲ್ಲಿ ಅವರಿಂದ ಯಾವುದೇ ದಾಖಲೆಗಳನ್ನು ಪಡೆದುಕೊಂಡಿರಲಿಲ್ಲ, ಸಾಕ್ಷಿ ಮುಂದುವರೆದು ಅವರು ಪರಿಚಯಸ್ತರಾಗಿದ್ದ ಕಾರಣ ದಾಖಲೆಗಳನ್ನು ಪಡೆದುಕೊಂಡಿರಲಿಲ್ಲ ಎಂದು ನುಡಿಯುತ್ತಾರೆ. 5 ಲಕ್ಷ ರೂ.ಗಳಿಗೆ ಯಾವುದೇ ರೀತಿಯ ಬಡ್ಡಿ ವಿಧಿಸಿರಲಿಲ್ಲ.

**4.** ಸೆಪ್ಟೆಂಬರ್ 2021 ರಲ್ಲಿ ಆರೋಪಿ ರೂ.21,50,000/-ಗಳನ್ನು ಸಾಲ ಕೇಳಿದ್ದರು ಎಂದು ದೂರಿನಲ್ಲಿ ನಮೂದಿಸಿರುತ್ತೀರಿ ಎಂದರೆ ಸರಿ. ಆ ಹಣವನ್ನು ದಾಮೋದರ್ ಮತ್ತು ಶಾಂತಿ ಎಂಬುವವರಿಂದ ಸಾಲ ಪಡೆದು ಆರೋಪಿಗೆ ನೀಡಿರುತ್ತೇನೆ ಎಂದು ನಮೂದಿಸಿರುತ್ತೇನೆ ಎಂದರೆ ಸರಿ. ದಾಮೋದರ್ ರವರೂ ಸಹ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಾರೆ. ಅವರೂ ಸಹ ಆದಾಯ ತೆರಿಗೆ ಪಾವತಿದಾರರಾಗಿರುತ್ತಾರೆ. ನಾನು ದಾಮೋದರ್ ರವರಿಂದ ಹಣ ಪಡೆದುಕೊಂಡ ವೇಳೆಯಲ್ಲಿ ಅವರಿಗೆ ಯಾವುದೇ ಲಿಖಿತ ದಾಖಲೆಯನ್ನು ಬರೆದುಕೊಟ್ಟಿರುವುದಿಲ್ಲ. ಶಾಂತಿಯವರು ಆದಾಯ ತೆರಿಗೆ ಪಾವತಿದಾರರಾಗಿರುವುದಿಲ್ಲ. ಆರೋಪಿಗೆ ರೂ.21,50,000/- ಗಳನ್ನು ನೀಡಿದ ವೇಳೆಯಲ್ಲಿ ಅವರಿಂದ ಯಾವ ದಾಖಲೆಗಳನ್ನು ಪಡೆದುಕೊಂಡಿದ್ದೀರಿ ಎಂದರೆ ಸಾಕ್ಷಿಯು ಯಾವುದೇ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ ಸಾಕ್ಷಿ ಮುಂದುವರೆದು ಕಟ್ಟಡವನ್ನು ಮಾರಾಟ ಮಾಡಿ ಹಣ ನೀಡಿದ್ದೇನೆ ಎಂದು ತಿಳಿಸಿದರು ಎಂದು ನುಡಿಯುತ್ತಾರೆ. ದಾಮೋದರ್ ರವರಿಂದ 10 ಲಕ್ಷ ರೂ.ಗಳನ್ನು, ಶಾಂತಿರವರಿಂದ 8 ಲಕ್ಷ ರೂ.ಗಳನ್ನು ಮತ್ತು ಉಳಿಕೆ ರೂ.3,50,000/- ಗಳನ್ನು ನನ್ನ ಉಳಿತಾಯದಿಂದ ನೀಡಿದೆನು. ದಾಮೋದರ್ ಮತ್ತು ಶಾಂತಿ ರವರು ನಿಮ್ಮ ಆತ್ಮ ಸ್ನೇಹಿತರು ಎಂದರೆ ಸರಿ. ಆರೋಪಿಗೆ ನೀವು 5 ಲಕ್ಷ ವಾಗಲೀ ಅಥವಾ ರೂ.21,50,000/- ಗಳನ್ನಾಗಲೀ ನೀವು ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿ ನಿಮಗೆ ಸಾಲದ ಮರುಪಾವತಿಗಾಗಿ ಚೆಕ್ಕು

ನೀಡಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಚೀಟಿ ವ್ಯವಹಾರಕ್ಕಾಗಿ ನೀಡಿದ ಚೆಕ್ಕುಗಳನ್ನು ದುರುಪಯೋಗಪಡಿಸಿಕೊಂಡು ಅವರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೀರಾ ಎಂದರೆ ಸಾಕ್ಷಿಯು ನಾನು ಚೀಟಿ ವ್ಯವಹಾರ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಚೆಕ್ಕು ಹಾಜರುಪಡಿಸುವ ಮೊದಲು ಆರೋಪಿಗೆ ಪೋನ್ ಮುಖಾಂತರ ತಿಳಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ಲಕ್ಷ ರೂ.ಗಳ ಮೇಲ್ಪಟ್ಟ ಹಣಕಾಸಿನ ವ್ಯವಹಾರವನ್ನು ನಗದಾಗಿ ವ್ಯವಹರಿಸಬಾರದು ಎಂಬ ವಿಷಯ ತಿಳಿದಿದೆಯೇ ಎಂದರೆ ನನಗೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ರಿಯಲ್ ಎಸ್ಟೇಟ್ ಬಿಸಿನೆಸ್ ಮಾಡುವ ಕಾರಣ ಆ ವಿಷಯ ತಿಳಿದಿರುತ್ತದೆ ಎಂದರೆ ಸಾಕ್ಷಿಯು ಆರೋಪಿಯು ನಗದಾಗಿ ಹಣ ಬೇಕು ಎಂದು ಕೇಳಿದ್ದ ಕಾರಣ ನಗದಾಗಿ ನೀಡಿದ್ದೇನೆ ಎಂದು ನುಡಿಯುತ್ತಾರೆ.

**5.** ಚೆಕ್ಕಿನಲ್ಲಿ ನಮೂದಿಸಿರುವ ಬರವಣಿಗೆ ಯಾರದ್ದು ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ನಿ.ಪಿ.1 ಕ್ಕೆ ನನ್ನ ಸಮಕ್ಷಮ ಸಹಿ ಮಾಡಿದರು. ನಿ.ಪಿ.1 ರಲ್ಲಿನ ಬರವಣಿಗೆ ಹಾಗೂ ಸಹಿಗಳಲ್ಲಿ ವ್ಯತ್ಯಾಸವಿದೆ ಎಂದರೆ ನನಗೆ ತಿಳಿಯುವುದಿಲ್ಲ ಎಂದು ನುಡಿಯುತ್ತಾರೆ. ನೀವು ಖಾಲಿ ಚೆಕ್ಕನ್ನು ಪಡೆದುಕೊಂಡು ಅದನ್ನು ನೀವೇ ಭರ್ತಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ದಾಮೋದರ್ ಮತ್ತು ಶಾಂತಿರವರನ್ನು ಸಾಕ್ಷಿದಾರರನ್ನಾಗಿ ಹಾಜರುಪಡಿಸಲು ಸಾಧ್ಯವೇ ಎಂದು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ದಾಮೋದರ್ ಹಾಗೂ ಶಾಂತಿರವರ ಸಮಕ್ಷಮ ನಾನು ಆರೋಪಿಗೆ ಹಣ ನೀಡಿದೆನು. ಆ ವಿಷಯವನ್ನು ನಿಮ್ಮದೂರಿನಲ್ಲಿ ತಿಳಿಸಿರುವುದಿಲ್ಲ ಎಂದರೆ ಸಾಕ್ಷಿಯು ನಮ್ಮ ವಕೀಲರಿಗೆ ತಿಳಿಸಿದ್ದೆನು ಎಂದು ನುಡಿಯುತ್ತಾರೆ. ಶಾಂತಿಯವರಿಂದ ಸಾಲ ಪಡೆದು ಅದನ್ನು ಆರೋಪಿಗೆ ನೀಡಿರುವ ವಿಷಯ ನಿಮ್ಮ ಪಿರ್ಯಾದಿನಲ್ಲಿ ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ಆ ವಿಷಯವನ್ನು ನಮ್ಮ ವಕೀಲರಿಗೆ ತಿಳಿಸಿದ್ದೇನೆ

ಎಂದು ನುಡಿಯುತ್ತಾರೆ. ಪಿರ್ಯಾದಿನ 2 ನೇ ಖಂಡಿಕೆಯಲ್ಲಿ ನಮೂದಿಸಿರುವ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನಿಮಗೆ ಯಾವುದೇ ಹಣ ಬಾಕಿ ನೀಡಲು ಬಾದ್ಯಸ್ತರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.